**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 10865/2015**

**ಚಾಸಾ- 1 ಪ್ರಾ ಸಾ-1**

| | |
|---|---|
| **ಸಾಕ್ಷಿದಾರರ ಹೆಸರು** | ಅಂಥೋನಿ |
| **ತಂದೆಯ ಹೆಸರು** | ರೋಬನ್ |
| **ವಯಸ್ಸು** | 54 ವರ್ಷ |
| **ಉದ್ಯೋಗ** | ಚಾಲಕ |
| **ವಾಸ** | ಸೇವಾ ನಗರ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 19.02.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಒಂದನೇ ಆರೋಪಿ ನಾಗರಾಜ್ ಮತ್ತು ರವಿ ನನಗೆ ಪರಿಚಯ. ಎರಡನೆ ಆರೋಪಿ ಯಾಸಿನ್ ನನಗೆ ಪರಿಚಯವಿಲ್ಲ. ನನ್ನ ಮಾಲೀಕತ್ವದಲ್ಲಿ ಒಂದು ಡೀಸೆಲ್ ಟ್ಯಾಂಕರ್ ಲಾರಿ ನಂ.ಕೆಎ-01-ಡಿ2485 ಇತ್ತು. ಅದಕ್ಕೆ ಒಂದನೇ ಆರೋಪಿ ನಾಗರಾಜ್ ಚಾಲಕ ಆಗಿದ್ದ ಮತ್ತು ರವಿ ಎಂಬಾತ ಕ್ಲಿನರ್ ಆಗಿದ್ದ. ದೇವನಗುಂಡಿಯಲ್ಲಿರುವ ಹೆಚ್.ಪಿ.ಸಿ.ಎಲ್ ಡಿಪೋ ಜೊತೆಗೆ ಡೀಸೆಲ್ ಮತ್ತು ಪೆಟ್ರೋಲ್ ಸಾಗಿಸಲು ಕರಾರು ಮಾಡಿಕೊಂಡಿದ್ದೆ. ಸದರಿ ಕರಾರು ಪತ್ರ ನನ್ನ ಹೆಂಡತಿ ಚಾಸಾ-2 ರವರ ಹೆಸರಿನಲ್ಲಿತ್ತು. ಸದರಿ ಲಾರಿ ಮೂಲಕ ಡೀಸೆಲ್ ನ್ನು ಬೆಂಗಳೂರಿನ ಪೇಟ್ರೋಲ್ ಬಂಕ್ ಗಳಿಗೆ ಮತ್ತು ಶಾಂತಿನಗರದ ಬಿಎಂಟಿಸಿ ಡಿಪೋ ಬಂಕ್ ಗಳಿಗೆ ಪೇಟ್ರೋಲ್ ಮತ್ತು ಡೀಸೆಲ್ ಸರಬರಾಜು ಮಾಡುತ್ತಿದ್ದರು. ನಾನು 25 ವರ್ಷಗಳಿಂದ ಈ ರೀತಿಯಾಗಿ ಪೇಟ್ರೋಲ್ ಮತ್ತು ಡೀಸೆಲ್ ಸರಬರಾಜ ಮಾಡುತ್ತಿದ್ದೆ.

2. ಒಂದನೇ ಆರೋಪಿ ನಾಗರಾಜ್ ನಾನು ದೂರು ನೀಡುವ ಮೊದಲು ಆರು ತಿಂಗಳ ಹಿಂದಿನಿಂದ ನನ್ನ ಬಳಿ ಕೆಲಸ ಮಾಡುತ್ತಿದ್ದ. ಸದರಿ ಆರು ತಿಂಗಳ ಅವಧಿಯಲ್ಲಿ ಒಂದನೇ ಆರೋಪಿ ನಾಗರಾಜ್ ಪೇಟ್ರೋಲ್ ಮತ್ತು ಡೀಸೆಲ್ ನ್ನು ದೇವನಗುಂಡಿಯಿಂದ ತಂದು ಬೆಂಗಳೂರಿಗೆ ಸರಬರಾಜು ಮಾಡುತ್ತಿದ್ದ. ದಿ.22.06.2012 ರಂದು ದೇವನಗುಂಡಿಯಲ್ಲಿ ಸುಮಾರು ಮಧ್ಯಾಹ್ನ 02.00

ರಿಂದ 03.00 ಗಂಟೆ ಸಮಯದಲ್ಲಿ 20,000 ಲೀಟರ್ ಹೆಚ್.ಪಿ.ಸಿ.ಎಲ್ ಡಿಪೋ ಡೀಸೆಲ್ ತುಂಬಿಸಿಕೊಂಡಿದ್ದ. ಅದನ್ನು ಶಾಂತಿನಗರದ ಬಿಎಂಟಿಎ ಡಿಪೋಗೆ ಸರಬರಾಜು ಮಾಡಬೇಕಾಗಿತ್ತು. ಆದರೆ ಆ ದಿನ ಲಾರಿ ಬರಲಿಲ್ಲ. ಮರುದಿನ ದಿ.23.06.2012 ರಂದು ಮಧ್ಯಾಹ್ನ ಸದರಿ ಲಾರಿ ಬಂದಿಲ್ಲ ಎಂದು ನನಗೆ ತಿಳಿಯಿತು. ನಂತರ ಶಾಂತಿನಗರದ ಡಿಪೋ ಮುಂದೆ ಒಂದು ಮೋರಿ ಹತ್ತಿರ ಖಾಲಿ ಲಾರಿಯನ್ನು ನಿಲ್ಲಿಸಿರುವುದು ಕಂಡು ಬಂದಿರುತ್ತದೆ. ನಾನು ಅಲ್ಲಿಗೆ ಹೋಗಿ ಸದರಿ ಲಾರಿಯನ್ನು ನೋಡಿದಾಗ ಅದರಲ್ಲಿ ಡೀಸೆಲ್ ಇರಲಿಲ್ಲ ಮತ್ತು ಒಂದನೇ ಆರೋಪಿ ನಾಗರಾಜ್ ಹಾಗೂ ರವಿ ಸಹ ಇರಲಿಲ್ಲ. ಲಾರಿಯಲ್ಲಿ ಡೀಸೆಲ್ ತುಂಬಿಸಿದಾಗ ಅದನ್ನು ಸಿಲ್ ಮಾಡಿ ಕಳುಹಿಸುತ್ತಾರೆ. ನಾನು ನೋಡಿದಾಗ ಸದರಿ ಸಿಲ್ ಮುರಿದು ಓಪನ್ ಮಾಡಿದ್ದರು ಮತ್ತು ಡೀಸೆಲ್ ನ್ನು ಯಾರಿಗೋ ಮಾರಾಟ ಮಾಡಿದ್ದರು ಎಂದು ತಿಳಿಯಿತು. ನಂತರ ನಾನು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ನೀಡಿದ್ದ ದೂರು ಆಗಿರುತ್ತದೆ. ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಅದರ ಮೇಲೆ ನನ್ನ ಸಹಿ ಇದೆ. ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಇದರಿಂದ ನನಗೆ ಸುಮಾರು ರೂ.15 ಲಕ್ಷ ನಷ್ಟ ಉಂಟಾಗಿರುತ್ತದೆ. ಆರೋಪಿತರು ಕಳ್ಳತನ ಮಾಡಿ ನನಗೆ ನಷ್ಟ ಉಂಟು ಮಾಡಿದ್ದರು. ದೂರು ನೀಡಿದ ನಂತರ ಪೊಲೀಸರು ಮರುದಿನ ವಾಹನದ ಹತ್ತಿರ ಬಂದು ಪಂಚನಾಮೆ ಮಾಡಿರುತ್ತಾರೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ಆಗ ನನ್ನಜೊತೆಗೆ ವಿಜಯ್ ಕುಮಾರ್ ಮತ್ತು ರಾಜೇಶ್ ಎನ್ನುವವರು ಇದ್ದರು. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ದಾಖಲೆಯ ಮೇಲಿನ ತನ್ನ ಸಹಿಯನ್ನು ಗುರುತಿಸಿದ್ದು ಅದು ಪಂಚನಾಮೆಯಾಗಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಪೊಲೀಸರು ಸದರಿ ಖಾಲಿ ಲಾರಿಯನ್ನು ತೆಗೆದುಕೊಂಡು ಹೋಗಿ ಠಾಣೆಯ ಹತ್ತಿರ ಇಟ್ಟರು. ಲಾರಿ ನೋಡಿದರೆ ಗುರುತಿಸುತ್ತೇನೆ. ನಾನು ಸದರಿ ಲಾರಿಯನ್ನು ನ್ಯಾಯಾಲಯದ ಮೂಲಕ ಬಿಡಿಸಿಕೊಂಡಿರುತ್ತೇನೆ. ಸಾಕ್ಷಿ ಪೋಟೊಗಳಲ್ಲಿರುವ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿನಾಲ್ಕು ಪೋಟೊಗಳನ್ನು ನಿಪಿ.3 ರಿಂದ 6 ಎಂದು ಗುರುತಿಸಲಾಯಿತು. ನಾನು ಲಾರಿಯನ್ನು ನೋಡಿದಾಗ ಸಿಲ್ ನ್ನು ಮುರಿದು ತೆಗೆದು ಡೀಸೆಲ್ ತೆಗೆದುಕೊಂಡಿರುವುದು ಗೊತ್ತಾಯಿತು. ಅದನ್ನು ನಿಪಿ.5 ಮತ್ತು 6 ಪೋಟೊಗಳಲ್ಲಿ ಕಾಣಬಹುದು. ಲಾರಿಯನ್ನು ಓಡಿಸಲು ಆಗಿರಲಿಲ್ಲ ಇನ್ನೊಂದು ಲಾರಿಯ ಮೂಲಕ ಎಳೆದುಕೊಂಡು ಠಾಣೆಗೆ ಒಯ್ಯುದಿರುತ್ತಾರೆ. ಒಂದನೇ ಆರೋಪಿ ನಾಗರಾಜ್ ಸದರಿ ಲಾರಿಯ ಇಂಜಿನ್ ಗೆ ಬೆಂಕಿ

ಹಚ್ಚಿದ್ದರಿಂದ ಪೈಪ್ ಸುಟ್ಟು ಹೋಗಿತ್ತು. ಆದ್ದರಿಂದ ಲಾರಿಯನ್ನು ಓಡಿಸಲು ಆಗುತ್ತಿರಲಿಲ್ಲ. ಅಗ್ರಿಮೆಂಟ್ ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಮೂಲ ಕರಾರು ಪತ್ರ ಇರದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಹಿ.ಸ.ಸ.ಅಭಿಯೋಜಕರು ಕಾಲವಕಾಶ ಕೋರಿರುತ್ತಾರೆ. ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**